ಬಾದಾಮಿ ತಾಲ್ಲೂಕಿನಲ್ಲಿ ಆರೋಗ್ಯ ಉಪಘಟಕದ ಮಂಜೂರಾತಿ

೯೮೪ ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬಾದಾಮಿ ತಾಲ್ಲೂಕು ಜಮ್ಮನಕಟ್ಟಿ ಗ್ರಾಮದ ಜನರು ಆರೋಗ್ಯ ಉಪ ಘಟಕಕ್ಕಾಗಿ ೨೫,೦೦೦ ರೂಪಾಯಿ ಹಾಗೂ ಜಮೀನನ್ನು ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರಕಾರದವರು ಈ ವರ್ಷದಲ್ಲಿಯೇ ಆದಕ್ಕೆ ಮಂಜೂರಾತಿ ನೀಡುವರೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).--

ಅ) ಬಂದಿದೆ.

ಆ) ಜಮ್ಮನಕಟ್ಟಿ ಗ್ರಾಮವು ರಿಕ್ತಪಲ್ಲದ ಕ್ಷೇತ್ರದಲ್ಲಿ ಬರುವುದರಿಂದ ಸದ್ಯಕ್ಕೆ ಪ್ರಾಥಮಿಕ ಆರೋಗ್ಯ ಘಟಕವನ್ನು ಮಂಜೂರು ಮಾಡಲಾಗುವುದಿಲ್ಲ.

ರಾಜ್ಯದಲ್ಲಿ ವೃದ್ಧಾಪ್ಯ ವೇತನ ಮಂಜೂರು ಮಾಡಿರುವುದು

೯೬೫ ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದ ಗುಡ್ಡ) ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು.ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟುಉತ್ತರಿಸುವರೆ.

ಅ) ರಾಜ್ಯದಲ್ಲಿ ಒಟ್ಟು ಎಷ್ಟು ಜನರಿಗೆ ವೃದ್ಧಾಪ್ಯ ವೇತನ ಕೊಡಲಾಗಿದೆ ?(ಜಿಲ್ಲಾವಾರು ಅಂಶ ಗಳನ್ನು ಒದಗಿಸುವುದು).

ಆ) ಒಟ್ಟು ವೃದ್ಧಾಪ್ಯ ವೇತನ ಮೊತ್ತವೆಷ್ಟು ?

ಇ) ಈ ವೃದ್ಧಾಪ್ಯ ವೇತನ ಕೊಡುವುದು ವೃಥಾ ವ್ಯರ್ಥವೆಂದು ಸರಕಾರದವರ (ಭಾವಿಸುವರೇ) ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಸರಕಾರದವರು ವೃದ್ಧಾಪ್ಯ ವೇತನದ ಬದಲಾ ಗಂಜಿ ಕೇಂದ್ರಗಳನ್ನು ಪ್ರಾರಂಭಿಸಿ ಈ ವಂಚಿತ ಆಹಾರ ಒದಗಿಸುವ ವ್ಯವಸ್ಥೆ ಮಾಡುವರೆ ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).--

ಅ) ರಾಜ್ಯದಲ್ಲಿ ೩೧-೧೨-೮೪ರವರೆಗೆ ೪,೨೬,೦೦೬ ಜನರಿಗೆ ವೃದ್ಧಾಪ್ಯ ವೇತನ ಮಂಜೂರು ಮಾಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ.

ಆ) ಇದುವರೆಗೆ ೧೧೪.೯೨ ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ.

ಇ) ಇಲ್ಲ.

ಈ) ಇಲ್ಲ.